ಈ ಶಿಕ್ಷಣದ ಉದ್ದೇಶವೇನು? ವಿವೇಕಾನಂದರು ಹೇಳುತ್ತಾರೆ, "ನಿಜವಾದ ಶಿಕ್ಷಣ ಗುಮಾಸ್ತರನ್ನು ತಯಾರಿಸುವುದಲ್ಲ. ಆತ್ಮ ಪ್ರತ್ಯಯವನ್ನುಳ್ಳ ಮಾನವಶ್ರೇಷ್ಠರನ್ನು ನಿರ್ಮಾಣ ಮಾಡುವುದು."

ಅನಕ್ಷರತೆಯಂತೆಯೇ ಜಾತೀಯತೆ ಕೂಡ ಮನುಷ್ಯರನ್ನು ಶೋಷಿಸುವ ಸಾಧನವಾಗಿದೆ. ನಿಜವಾದ ವೇದಾಂತ ಮಾನವ ರೆಲ್ಲರೂ ಸಮಾನರು ಎನ್ನುತ್ತದೆ. ವೇದಾಂತ ಜಾತಿಭಾವನೆಗೆ ವಿರೋಧವಾದದ್ದು. ಅನೇಕ ಮತ–ಧರ್ಮಗಳು ಮಾನವತೆಯನ್ನು ವಿಚ್ಛಿದ್ರಗೊಳಿಸಿವೆ. ಈ ದೇಶಕ್ಕೆ ಅನ್ಯಧರ್ಮದವರು ಬಂದು ಇಲ್ಲಿ ಯವರನ್ನು ಮತಾಂತರಗೊಳಿಸಿದ್ದಕ್ಕೆ ಕಾರಣ, ಉಚ್ಚವರ್ಗದವರು ಕೆಳವರ್ಗದವರನ್ನು ಸಮಾನವಾಗಿ ಕಾಣದೆ ಪ್ರತ್ಯೇಕವಾಗಿ ಕಂಡದ್ದೇ. ಪರಮಹಂಸರು, ಎಲ್ಲ ಧರ್ಮಗಳ ಸಾಧನೆ ಮಾಡಿ ಅವುಗಳ ತಿರುಳು ಒಂದೇ ಎಂದು ಸಾರಿದರು. ಅವರ ಶಿಷ್ಯ ವಿವೇಕಾನಂದರು ಈ ಸ್ಥಿತಿಯನ್ನು ಭಾರತೀಯರ ಮನಸ್ಸಿಗೆ ತಂದುಕೊಟ್ಟರು.

೧೮೯೮ ರ ಜೂನ್ ೧೦ ರಂದು ತಮ್ಮ ಮುಸ್ಲಿಂ ಮಿತ್ರ ಮಹಮ್ಮದ್ ಸರ್ಫರಜ್ ಅವರಿಗೆ ಬರೆದ ಪತ್ರದಲ್ಲಿ ಸ್ವಾಮೀಜಿ ಹೀಗೆ ಹೇಳುತ್ತಾರೆ: "ಎಲ್ಲಿ ವೇದಗಳಾಗಲಿ, ಬೈಬಲ್ ಆಗಲಿ, ಖುರಾನ್ ಆಗಲಿ ಇಲ್ಲವೋ – ಅಂಥ ಒಂದು ನೆಲೆಗೆ ಮನುಷ್ಯ ಕುಲವನ್ನು ಕರೆದೊಯ್ಯಬೇಕೆಂಬುದು ನನ್ನ ಬಯಕೆ."

**ಇನ್ನು ಸ್ತ್ರೀಯರ ಬಗ್ಗೆ :** ಇತರ ವರ್ಗದವರು ವೇದವನ್ನೋದಲು ಅನರ್ಹರೆಂದು ಮೇಲಿನವರು ತೀರ್ಮಾನಿಸಿದಾಗಲೇ ಸ್ತ್ರೀಯರ ಹಕ್ಕುಬಾಧ್ಯತೆಗಳು ನಷ್ಟವಾದವು. ಒಂದು ಕಾಲಕ್ಕೆ ಮೈತ್ರೇಯಿ–ಗಾರ್ಗಿಯರಂಥ ಬ್ರಹ್ಮಜ್ಞಾನಿಗಳಿದ್ದ ದೇಶ ಇವತ್ತು ಏಕೆ ಮಹಿಳೆಯರನ್ನು ಹೀಗೆ ನಡೆಯಿಸಿಕೊಳ್ಳುತ್ತಿದೆ? ಮಹಿಳೆಯರಿಗೆ ಸಲ್ಲಬೇಕಾದ ಗೌರವವನ್ನು ಯಾವ ಜನಾಂಗ ಕೊಟ್ಟಿಲ್ಲವೋ ಅದು ಖಂಡಿತ ಏಳಿಗೆ ಪಡೆಯಲಾರದು. ಸೋದರಿ ನಿವೇದಿತಾಗೆ ಬರೆದ ಪತ್ರದಲ್ಲಿ ಸ್ವಾಮೀಜಿ, "ಈ ದೇಶದಲ್ಲಿ ಎರಡು ಪಾಪಗಳಿವೆ. ಒಂದು ಮಹಿಳೆಯ ಶೋಷಣೆ, ಇನ್ನೊಂದು ಶ್ರೀಸಾಮಾನ್ಯರ ಶೋಷಣೆ" ಎಂದು ಬರೆದಿದ್ದಾರೆ. ಹೀಗೆ ಸ್ತ್ರೀಯರ ಪರವಾಗಿ ಮೊಟ್ಟ ಮೊದಲು ಮಾತಾಡಿದ ಸಂನ್ಯಾಸಿಯೆಂದರೆ ವಿವೇಕಾನಂದರು.

ಭಾರತದ ಜನರನ್ನು, ಅವರ ಕಂದಾಚಾರ ಮೂಢನಂಬಿಕೆಗಳ ಕುರಿತಾಗಿ ಸ್ವಾಮೀಜಿ ಹೀಗೆ ಎಚ್ಚರಿಸಿದರು:

(ಅ) ಪ್ರಾಚೀನವಾದದ್ದೆಲ್ಲ ಪವಿತ್ರವಾದದ್ದು ಎಂಬ, ಶಾಸ್ತ್ರ ಅಥವಾ ಗ್ರಂಥಗಳಲ್ಲಿ ಹೇಳಿರುವುದೆಲ್ಲ ಸತ್ಯ ಎಂಬ ಮೂಢನಂಬಿಕೆಯಿಂದ ಪಾರಾಗಬೇಕು. 'ಗ್ರಂಥಾರಾಧನೆ'ಯಿಂದ ಮುಕ್ತರಾಗಬೇಕು.

(ಆ) ತನ್ನ ಧರ್ಮವೇ ಶ್ರೇಷ್ಠ ಎಂಬ ಸ್ವಮತ ಭ್ರಾಂತಿಯೂ ಒಂದು ಬಗೆಯ ಮೂಢನಂಬಿಕೆ.

(ಇ) ಪುರುಷಪ್ರಯತ್ನವನ್ನು ಎತ್ತಿಹಿಡಿಯದ ವಿಕೃತ ಕರ್ಮವಾದದ ಕಲ್ಪನೆಯಿಂದ ಬಿಡುಗಡೆ.

(ಈ) ಸ್ವರ್ಗ–ನರಕಗಳು ಹಾಗೂ ದುರ್ಬಲ ಮನಸ್ಸಿನವರ ಜ್ಯೋತಿಷ ಕುರಿತಾದ ನಂಬಿಕೆಗಳಿಂದ ಬಿಡುಗಡೆ.

ಸ್ವಾಮೀಜಿ, ಜನರ ಬದುಕನ್ನು ಸ್ಥಗಿತಗೊಳಿಸುವ ಎಲ್ಲ ಅವೈಚಾರಿಕವಾದ ಹಿಡಿತಗಳನ್ನು 'ಮೂಢನಂಬಿಕೆ' ಎಂದು ಕರೆದು, ತನ್ನಲ್ಲಿ ತಾನು ನಂಬಿಕೆ ಇರಿಸಿಕೊಳ್ಳುವ ನಿರ್ಭಯ ನಿಲುವನ್ನೇ 'ಆಸ್ತಿಕತೆ' ಎಂದು ಕರೆದಿದ್ದಾರೆ.

ಈ ಸಂದರ್ಭದಲ್ಲಿ ಸ್ವಾಮಿ ರಂಗನಾಥಾನಂದರ ಮಾತುಗಳನ್ನು ಗಮನಿಸಬೇಕು: "ಭಾರತದ ಅವನತಿಗೆ ಮುಖ್ಯಕಾರಣ ತನ್ನ ಸುತ್ತ ಅದು ದೊಡ್ಡ ಸಂಪ್ರದಾಯದ ಗೋಡೆಯನ್ನು ಕಟ್ಟಿಕೊಂಡದ್ದು. ಹೀಗಾಗಿ ಹೊರಗಿನ ಭಾವನೆಗಳನ್ನು ನಾವು ಬರಗೊಡಲಿಲ್ಲ. ಇತರ ಜನಾಂಗಗಳಿಂದ ಬೇರೆಯಾಗಿದ್ದುಕೊಂಡು, ಯಾವುದೇ ವ್ಯಕ್ತಿಯಾಗಲಿ, ರಾಷ್ಟ್ರವಾಗಲಿ ಬದುಕಲಾರದು ಎನ್ನುವುದು ನನಗೆ ಖಚಿತವಾಗಿದೆ. ಈ ಸ್ಥಿತಿಗೆ ಏಕಸೂತ್ರ ಪರಿಹಾರವೆಂದರೆ ಜಗತ್ತಿನ ಪ್ರವಾಹಕ್ಕೆ ಮತ್ತೆ ಹಿಂದಿರುಗುವುದು. ವಿಕಾಸವೇ ಜೀವನ, ಸಂಕೋಚವೇ ಮೃತ್ಯು. "

ವಿವೇಕಾನಂದರು ಒಬ್ಬ ವ್ಯಕ್ತಿಯಾಗಿ ಭಾರತವನ್ನು ಜಗತ್ತಿನ ಸಾಂಸ್ಕೃತಿಕ ಪ್ರವಾಹಕ್ಕೆ ಜೋಡಿಸಿದರು. ಇದರಿಂದ ಪೂರ್ವ ಹಾಗೂ ಪಶ್ಚಿಮಗಳೆರಡೂ ಒಂದನ್ನೊಂದು ಕಂಡುಕೊಂಡವು. ಪಶ್ಚಿಮಕ್ಕೆ ಅವರು ಬೋಧಿಸಿದ್ದು, ಭಾರತದ ವೇದಾಂತವನ್ನು. ಭಾರತಕ್ಕೆ ಅವರು ವೇದಾಂತ ತತ್ತ್ವಗಳ ಅನುಷ್ಠಾನದ ಮೂಲಕ ಅದರಲ್ಲಿ ಹೊಸಚೈತನ್ಯವನ್ನು ಮೂಡಿಸುವ ಪುರುಷ ನಿರ್ಮಾಣದ ಶ್ರದ್ಧೆಯ ಕಲ್ಪನೆಗಳನ್ನು ಬೋಧಿಸಿದರು.

## ಶ್ರೀ ವಿವೇಕಾನಂದರಿಗೆ

ರಾಮಕೃಷ್ಣ ದಿವ್ಯ ಯೋಗಧನುವಿಗೆ ತೊಟ್ಟ ಬ್ರಹ್ಮಾಸ್ತ್ರ ನೀನು
ವಿಶ್ವದಂತಸ್ಸತ್ವಮೂರ್ತಿಗೊಂಡಿಳೆಗಳಿದ ಕ್ರತುಶಕ್ತಿ ನೀನು
ಸಂಶಯದ ದುರ್ಗವನು ಸೀಳಿ
ಶ್ರದ್ಧೆಯ ಧ್ವಜವ ನಟ್ಟ ವಿಜಿಗೀಷು
ಪರಮಹಂಸಾಚಲದ ಶಿವಗಂಗೆಯನು ತಂದು
ಜಗಕೆಲ್ಲ ಹರಿಸಿರುವ ಯೋಗಪುರುಷ
ಮುಟ್ಟಿದ್ದು ಹೊನ್ನಾಯ್ತು ದಿವ್ಯಪುರುಷ !

ನಿನ್ನ ವಾಣಿಯು ತಟ್ಟಿ, ಚಿಪ್ಪೊಡೆದು ಅದರಲ್ಲಿ
ಹುದುಗಿದವರೆದ್ದೆದ್ದು ಹೊರಬಂದರು.
ಕ್ರಿಮಿ ಎಂದು ಮಲಗಿದವರೆದ್ದು ಕುಲಶೈಲದೊಲು
ಮುಗಿಲೆಡೆಗೆ ಮುಡಿ ಎತ್ತಿ ನಿಂತುಕೊಳಲು
ಏಳು ಕಡಲಿನ ತೆರೆಯು ತಾಳವನು ಹಾಕಿದುವು
ದಿಕ್ಕುದೆಸೆ ಹಾಡಿದವು ಜಯಗಾಥವ !
ಪೂರ್ವ ಪಶ್ಚಿಮವೆರಡು ಒಂದನೊಂದನೊಪ್ಪಿ
ಕಂಡುಕೊಂಡವು ದಿವ್ಯ ಹೃದಯಾರ್ಥವ !

ನೆಲಕು ಮುಗಿಲಿಗು ಏಕವಾಗಿ ನಿಂತ ಮಹಾಂತ
ನಿನ್ನಡಿಯ ಗಂಗೆಯಲಿ ಕರಗಲೀ ಸ್ವಾಂತ !

*– ಡಾ. ಜಿ.ಎಸ್. ಶಿವರುದ್ರಪ್ಪ*

# ವಿವೇಕ ಚಿಂತಾಮಣಿ

## (ಸ್ವಾಮಿ ವಿವೇಕಾನಂದರ ಸೂಕ್ತಿಗಳನ್ನಾಧರಿಸಿ)

ಡಾ. ಚೆನ್ನವೀರ ಕಣವಿ

ವಿಭೂತಿಪುರುಷ ಸ್ವಾಮಿ ವಿವೇಕಾನಂದರ ಜೀವನ, ಸಾಧನೆ, ಸಂದೇಶಗಳನ್ನು ಕುರಿತು ಕಳೆದ ಒಂದು ಶತಮಾನದಿಂದಲೂ ಕನ್ನಡದ ಹಲವಾರು ಕವಿವರ್ಯರು ತಮ್ಮ ಹೃದಯಂಗಮ ಕಾವ್ಯಧಾರೆಯನ್ನು ಹರಿಸಿದ್ದಾರೆ; ಆ ಮೂಲಕ ಯುಗಪುರುಷನ ಬಿಂಬವನ್ನು ಕನ್ನಡಜನತೆಯಲ್ಲಿ ಪ್ರತಿಬಿಂಬಿಸಿದ್ದಾರೆ. ಆ ದೀಪಮಾಲೆಯಲ್ಲಿ ಇದೊಂದು ನೂತನ ಉತ್ಕೃಷ್ಟ ಸೇರಿಕೆಯಾಗಿದೆ. ಲೇಖಕರೇ ಹೇಳಿಕೊಂಡಂತೆ, ಸ್ವಾಮಿ ವಿವೇಕಾನಂದರ ಕೆಲವೊಂದು ಸೂಕ್ತಿಗಳಿಗೆ ಕಾವ್ಯದ ರೂಪಕೊಡುವ ಸಣ್ಣ ಪ್ರಯತ್ನ ಇದಾಗಿದೆ. ಆದರೆ ಇದು ಅತ್ಯಂತ ಸಫಲ ಹಾಗೂ ವಿನೂತನ ಸೃಜನಾತ್ಮಕ ಸೃಷ್ಟಿಯೂ ಆಗಿದೆ ಎನ್ನುವುದು ನಮ್ಮ ಭಾವನೆ. ಸ್ವಾಮಿ ವಿವೇಕಾನಂದರಿಗೆ ಕಾವ್ಯಗುಚ್ಛವನ್ನು ಸಮರ್ಪಿಸಿರುವವರು ನಾಡಿನ ಅತಿ ಹಿರಿಯ ಕವಿಗಳೂ, ವಿದ್ವಾಂಸರೂ ಆದ ಡಾ. ಚೆನ್ನವೀರ ಕಣವಿ ಅವರು.

ಮಾನವನ ಮನದಲಡಗಿದೆ ವಿವಿಧ ಬಗೆ ಜ್ಞಾನ,
ಮುಚ್ಚಿರುವ ಮುಸುಕ ತೆರೆಯಬಲ್ಲವನೆ ಜಾಣ.
ಇನ್ನಷ್ಟು ತೆರೆಯಬಲ್ಲಡೆ ಅವನಾಗುವನು ಜ್ಞಾನಿ,
ಸಂಪೂರ್ಣ ತೆರೆದುಬಿಟ್ಟರೆ ಆತ ಸರ್ವಜ್ಞ:
ನಾವು ಅವನಿಗೆ ಋಣಿ.

* * * * *

ಪ್ರಪಂಚದಲಿ ಅತ್ಯಂತ ಉನ್ನತವಾದುದು ಮಾತೃಸ್ಥಾನ,
ನಿಸ್ವಾರ್ಥ ಅಭಿವ್ಯಕ್ತಿಗದು ತಕ್ಕ ತಾಣ;
ಭಗವತ್ಪ್ರೇಮವೊಂದೇ ಮಾತೃವಾತ್ಸಲ್ಯಕ್ಕಿಂತ ಮಿಗಿಲು –
ಅದಕಿಲ್ಲ ಹಗಲು – ಇರುಳು.

* * * * *

ಸತ್ಕಾರ್ಯದಿಂದ ಬರುವ ಸತ್ಫಲಗಳನು ಎಂದಿಗೂ
ತಡೆಯುವ ಶಕ್ತಿ ಜಗದೊಳಗಿಲ್ಲ;
ಪಾಪಕಾರ್ಯಗಳ ಫಲವನನುಭವಿಸಲೇಬೇಕು ಬೇರೆ ವಿಧಿಯಿಲ್ಲ.

* * * * *

ಬೌದ್ಧಿಕವಾಗಿ ಗ್ರಹಿಸಿದವನ ಸೋಲಿಸಬಹುದು
ಮತ್ತೊಂದು ಪ್ರಬಲ ವಾದ;
ಸಾಕ್ಷಾತ್ಕಾರ ಮಾಡಿಕೊಂಡವನಿಂದ ಬಲು ದೂರ ಎಲ್ಲ ವಾಗ್ವಾದ.

* * * * *

ಮರಣವಿಲ್ಲದ ಹಾಗೆ ಮಾಡುವರೆ ಅಲ್ಲಿ ಜನನವೂ ಇಲ್ಲ.
ಮರಣವಿಲ್ಲದ ಜನನ, ದುಃಖವಿಲ್ಲದ ಸುಖ ಅರ್ಥಹೀನ.
ಯಾವುದನೂ ಪ್ರತ್ಯೇಕ ಪಡೆಯಲಾರೆವು ನಾವು –
ವಸ್ತು ಒಂದೇ, ಅಭಿವ್ಯಕ್ತಿಗಳು ಮಾತ್ರ ಬೇರೆ ಬೇರೆ.

* * * * *

ವೈವಿಧ್ಯದಿಂದ ತುಂಬಿ ತುಳುಕಾಡುವದು ಈ ಜಗತ್ತು ;
ಇದರಂತರಾಳದಲ್ಲಿ ಹರಿವ ಏಕವನು ಕಂಡವಗೆ
ಜನ್ಮ–ಮೃತ್ಯುಗಳಡಿಗನಂತ ಪ್ರಾಣವನು ಬಲ್ಲವಗೆ
ಜಡಜಗತ್ತಿನಲಿ ಪ್ರಕಾಶಪೂರ್ಣಜ್ಞಾನ ಕಾಂಬವಗೆ –
ಅವನಿಗೆ ಮಾತ್ರ ಶಾಶ್ವತ ಶಾಂತಿ, ಇತರರಿಗೆ ಸಲ್ಲ.

* * * * *

ಪಾತ್ರೆಯಲಿ ನೀರು ಕುದಿವಾಗ ಮೊದಲೊಂದು ಗುಳ್ಳೆ ಮೇಲೆ
ನಂತರ ಮತ್ತೊಂದು, ಮಗುದೊಂದು ಹೀಗೆ ಸಾಲು ಸಾಲೆ.
ಕೊನೆಗೆ ಎಲ್ಲಾ ಸೇರಿ ಒಟ್ಟಿಗೆ ಕುದಿಯುವುದು.
ಈ ಪ್ರಪಂಚವು ಹಾಗೆ, ಪ್ರತಿಯೊಬ್ಬರೂ ಒಂದು ಗುಳ್ಳೆ
ದೇಶ ಕೋಶಗಳೆಲ್ಲ ಹತ್ತು ಹಲವಾರು ಗುಳ್ಳೆ
ಕ್ರಮೇಣ ಅವುಗಳೆಲ್ಲ ಒಂದಾಗುವವು ಭಿನ್ನ ಭೇದವಿರದೆ
ಏಕತ್ವ ವ್ಯಕ್ತವಾಗುವ ಕಾಲ ಬಂದೆ ಬಹುದೆಂಬುದೇ ನನ್ನ ಹಾರೈಕೆ.

* * * * *

ನಿಜವಾದ ಧರ್ಮ ಎಂದಿಗೂ ಬದಲಾಗದು.
ಅದೊಂದು ಸಾಕ್ಷಾತ್ಕಾರ; ಬರಿಯ ಮಾತಲ್ಲ, ನಂಬಿಕೆ ಸಿದ್ಧಿಯಲ್ಲ–
ಅವೆಲ್ಲ ಸುಂದರವಾಗಿದ್ದರೂ ಕೂಡ,
ನುಡಿದಂತೆ ನಡೆವುದು, ಅದರಂತೆ ಆಗುವುದು – ಇದುವೆ ಧರ್ಮ;
ಜೀವ ತಾನಾವುದನು ನಂಬುವದೋ ಅದರಂತೆ
ಪರಿವರ್ತನೆಗೊಂಬುವದು.

* * * * *

ಮನುಷ್ಯ ಉತ್ತಮನಾದರೆ ಒಳ್ಳೆಯವರು
ಕೆಟ್ಟವರೆಂಬ ಭೇದ ಕಾಣಿಸದು.
ಮಡಕೆಯನೊಂದುಸಲ ಸುಟ್ಟಮೇಲೆ ಆಕಾರ ಪುನಃ ಬದಲಾಗದು.
ಒಮ್ಮೆ ದೇವಸ್ಪರ್ಶ ಪಡೆದು ಜ್ಞಾನಾಗ್ನಿಯಲ್ಲಿ ಬೆಂದಾಗ
ಜೀವಿ ಪುನಃ ಬದಲಾಗನು.

* * * * *

ಮಾನವ ಜೀವನಕ್ಕೆ ಎರಡು ಗುರಿಗಳಿವೆ:
ಒಂದು ನಿಜವಾದ ಅರಿವು, ಮತ್ತೊಂದು ಆನಂದ.
ಸ್ವಾತಂತ್ರ್ಯವಿಲ್ಲದೆ ಇವೆರಡೂ ಅಸಾಧ್ಯ.
ನಿತ್ಯವೂ ಏಕತೆಯ ಅನುಭವಿಸುತಿರಬೇಕು.
ಎಲ್ಲ ಪಾಪಿಗಳಿಗೂ ತಾವು ಅಳಬೇಕು.
ಏಕೆನೆ ಅಲ್ಲಿ ಪಾಪಮಾಡುತ್ತಿರುವವರೂ ತಾವೇ.
ಆತ್ಮತ್ಯಾಗವೇ ಸನಾತನನಿಯಮ, ಆತ್ಮಪ್ರತಿಷ್ಠೆಯಲ್ಲ.

* * * * *

ನಾನು ವರ್ತಮಾನದಲ್ಲಿರುವೆ,
ಅನಂತಭವಿಷ್ಯಕ್ಕೆ ಬಾಗಿಲನು ತೆರೆದಿರುವೆ.
ಹಿಂದೆ ಆದದ್ದೆಲ್ಲ, ಮುಂದೆ ಬರುವುದನೆಲ್ಲ ಸ್ವೀಕರಿಸುವೆ.
ಈಗಿರುವುದನು ಈಗಲೇ ಅನುಭವಿಸುವೆ.
ಹೃದಯದ ಪ್ರತಿಯೊಂದು ಕಿಟಕಿ ತೆರೆದಿಟ್ಟಿರುವೆ.
ಹಿಂದಿನ ಮಹಾತ್ಮರಿಗೆಲ್ಲ ವಂದನೆಯ ಸಲ್ಲಿಸುವೆ;
ಈಗಿನವರಿಗೆ ಮತ್ತೆ ಮುಂದಿನವರಿಗೂ ಕೂಡ.



೧೯೬೭–೬೮ರಲ್ಲಿ ಅಮೆರಿಕಾದ ಚಿಕಾಗೋ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕನಾಗಿ ಕೆಲಸ ಮಾಡುತ್ತಿದ್ದಾಗ, ನಾನು ವಾಸವಾಗಿದ್ದ ಅಪಾರ್ಟ್‌ಮೆಂಟಿಗೆ ಸಮೀಪದಲ್ಲಿದ್ದ 'ಸ್ವಾಮಿ ವಿವೇಕಾನಂದ ವೇದಾಂತ ಸೆಂಟರ್' ಗೆ ಹಲವು ಭಾನುವಾರಗಳು ಬೆಳಗ್ಗೆ ಹೋಗಿ ಪ್ರಾರ್ಥನೆಯಲ್ಲಿ ಭಾಗವಹಿಸುತ್ತಿದ್ದೆ. ಅದಕ್ಕೆ ಕಾರಣ ನನ್ನ ವಿದ್ಯಾರ್ಥಿ ಜೀವನದಲ್ಲಿ ಕುವೆಂಪು ಬರೆದ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದರ ಜೀವನಚರಿತ್ರೆಗಳನ್ನು ಓದಿ ಸ್ಫೂರ್ತನಾಗಿ ಆಗಾಗ್ಗೆ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮಕ್ಕೆ ಹೋಗಿ ನಿರಂತರ ಸಂಪರ್ಕವನ್ನು ಹೊಂದಿದ್ದುದು. ಚಿಕಾಗೋ ನಗರದ ಡೌನ್‌ಟೌನ್ ಪ್ರದೇಶದಲ್ಲಿದ್ದ ಚಿಕಾಗೊ ಆರ್ಟ್ ಸೆಂಟರಿಗೆ ಹೋಗಿ ಅಲ್ಲೇ ಸ್ವಾಮಿ ವಿವೇಕಾನಂದರು ಪ್ರಪ್ರಥಮವಾಗಿ ವಿದೇಶಕ್ಕೆ ಪ್ರಯಾಣವನ್ನು ಮಾಡಿ ಉಪನ್ಯಾಸ ನೀಡಿದ್ದ ಸಭಾಂಗಣವನ್ನು ನೋಡಿ ಖುಷಿಯಾಗಿಬಿಟ್ಟೆ. ೧೯೮೦ರ ದಶಕದಲ್ಲಿ ಕನ್ಯಾಕುಮಾರಿಗೆ ಹೋಗಿ ಅಲ್ಲಿ ವಿವೇಕಾನಂದರು ಈಜಿ ಸಮುದ್ರ ದಾಟಿ ಕುಳಿತಿದ್ದ ದ್ವೀಪದ ಬಂಡೆಯನ್ನು ನೋಡಿ ಉತ್ಸಾಹಿತನಾಗಿದ್ದೆ. ನನ್ನ ಧ್ಯಾನದ ವಸ್ತು ಶ್ರೀರಾಮಕೃಷ್ಣ ಪರಮಹಂಸರು; ನನ್ನ ದೇಶಪ್ರೇಮ ಧರ್ಮ ಪ್ರೇಮದ ಸ್ಫೂರ್ತಿ ಸ್ವಾಮಿ ವಿವೇಕಾನಂದರು.

೧೮೯೩, ಸೆಪ್ಟೆಂಬರ್ ೧೧ ರಿಂದ ೨೭ ರವರೆಗೆ ಚಿಕಾಗೋದ ಕೊಲಂಬಸ್ ಸಭಾಂಗಣದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು ಮೊತ್ತಮೊದಲು, ಬ್ರಿಟಿಷರ ದಾಸ್ಯದಲ್ಲಿ ನರಳುತ್ತಿದ್ದ ಭಾರತೀಯರ ಹಿಂದೂಧರ್ಮದ ಪರವಾಗಿ ಧ್ವನಿಯೆತ್ತಿದರು. ಆಗ ಅವರು ಆಡಿದ ಮಾತುಗಳು ಈಗ ಇತಿಹಾಸ ಪ್ರಸಿದ್ಧವಾಗಿವೆ. ಮುಂದೆ ಅವರು ಆ ಬಗ್ಗೆ ವಿಶ್ವಾದ್ಯಂತ ಭಾರತಾದ್ಯಂತ ಮಾತನಾಡಿ ಜನರನ್ನು ಎಚ್ಚರಿಸಿದರು. ಆ ಬಗ್ಗೆ ಶ್ರೀ ಸಿ. ರಾಜಗೋಪಾಲಾಚಾರಿಯವರು ಹೀಗೆ ಉದ್ಗರಿಸಿದ್ದಾರೆ: "Swami Vivekananda saved Hinduism and saved India. But for him, we would have lost our religion and would not have gained our freedom. We therefore owe everything to Swami Vivekananda." (ಸ್ವಾಮಿ ವಿವೇಕಾನಂದರು ಹಿಂದೂ ಧರ್ಮವನ್ನು ಕಾಪಾಡಿದರು ಮತ್ತು ಭಾರತವನ್ನು ರಕ್ಷಿಸಿದರು. ಅವರಿಲ್ಲದೆ ಹೋಗಿದ್ದರೆ, ನಾವು ನಮ್ಮ ಧರ್ಮವನ್ನು ಕಳೆದುಕೊಳ್ಳುತ್ತಿದ್ದೆವು ಮತ್ತು ನಮ್ಮ ಸ್ವಾತಂತ್ರ್ಯವನ್ನೂ ಗಳಿಸಿಕೊಳ್ಳುತ್ತಿರಲಿಲ್ಲ. ಹೀಗಾಗಿ ನಮ್ಮೆಲ್ಲದಕ್ಕೂ ನಾವು ಸ್ವಾಮಿ ವಿವೇಕಾನಂದರಿಗೆ ಚಿರಋಣಿಯಾಗಿದ್ದೇವೆ. (ವಿವರಣೆಗೆ, ನೋಡಿ: Swami Harshananda : A Concise Encyclopaedia of Hinduism. Vol III, p. 600). ಕ್ರಿ.ಶ. ೧೩೩೬ರಲ್ಲಿ ಉದಯವಾದ ವಿಜಯನಗರ ಸಾಮ್ರಾಜ್ಯದಿಂದ ಹಿಂದೂಧರ್ಮವು ರಕ್ಷಣೆಗೊಂಡಿತು ಎಂಬ ಇತಿಹಾಸಕಾರರ ಮಾತು ಇಲ್ಲಿ ಜ್ಞಾಪಕಕ್ಕೆ ಬರುತ್ತದೆ.

ಚಿಕಾಗೋದಲ್ಲಿ ಸ್ವಾಮಿ ವಿವೇಕಾನಂದರು ಮಾಡಿದ ಭಾಷಣದ ಕೆಲವು ವಾಕ್ಯಗಳು ಹೀಗಿವೆ:"I thank you in the name of the mother of all religions; and I thank you in the name of the millions and millions of Hindu people of all classes and sects... I am proud to belong to a religion which has taught me both tolerance and universal acceptance. We accept all religions as true …. ( ವಿವಿಧ ಧರ್ಮಗಳ ಜನನಿಯ ಪರವಾಗಿ ನಾನು ನಿಮಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಹಿಂದೂ ಜನಾಂಗಕ್ಕೆ ಸೇರಿದ ಎಲ್ಲ